185(4)

Reg No. M 1299 (Founded 1917) Daily & Weekly
ವಾರದ ಸಂಚಿಕೆ

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 130] ಮಂಗಳವಾರ 13—2—45 [6 ಪೈ

CONQUER
GENERAL
SEXUAL
DEBILITIES
WITH
SHAKTI
SUDHA

ಚಿನ್ನ, ಬೆಳ್ಳಿ, ಒಡವೆಗಳು,
ಆಮಶಂಕೆಗೆ ಖಾತ್ರಿ ಗುಣಕಾರಿ
ಡಿಸೆಂಟಿಸೈಡ್
ಮತ್ತು
ರ್ಯಾಂಡ್‌ಕಂಪೆನಿಯ ಔಷಧಿಗಳು
ಬೇಕಾದರೆ
ಕಾಂತರಾಜ್ & ಕೋ
ರವೆ ಬೀದಿ, ಮೈಸೂರು.

Vote for —
The Poor Men's
Friend
Peoples' Favourite

ಮೈಸೂರು ಸಿಟಿ ರೇಷನಿಂಗ್

R 5. M I S. 708/44.

ಎಲ್ಲಾ ಸರ್ಕಾರಿ ರೇಷನ್ ಡಿಪೋ, ಮೊಹಲ್ಲಾ ಸಬ್ ಗೋಡೌನು ಮತ್ತು ಲೈಸೆನ್ಸ್ ಪಡೆದ ವರ್ತಕರ ಅಂಗಡಿ ಮತ್ತು ಸಹಕಾರ ಸಂಘಗಳಿಗೆ ಈ ಕೆಳಗೆ ಕಂಡ ದಿವಸಗಳಲ್ಲಿ ರಜಾ ಕೊಡಲ್ಪಟ್ಟಿರುತ್ತೆ.

2. ಅಖೈರು ಛಾರ್‌ಶಂಬ ಪ್ರಯುಕ್ತ ಮಹಮದೀಯ ಮತಸ್ಥರಿಗೆ ಮಾತ್ರ — 14-2-45 (ಬುಧವಾರ)

ಮೈಸೂರು] ಟಿ. ವಿ. ರೆಡ್ಡಿ,
ತಾ || 5-2-45] ರೇಷನಿಂಗ್ ಆಫೀಸರ್,
ಮೈಸೂರು ಸಿಟಿ.

TALK-A-TONE
(The Pioneer Film-mag
of S. India)
Local Agent—D. Mahadev
Opera Talkies, Mysore

ನಿಮ್ಮ ಓಟನ್ನು
ಸಾಧುವಾದ ಉಮೇದುವಾರರಿಗೆ ಕೊಡಿ

ಹಿಟ್ಲರ್ ಸಿಕ್ಕಿಬಿಟ್ಟನೆ

ಬರ್ಲಿನ್ನಿನ ದಾಳಿಯೊಂದರಲ್ಲಿ ಹಿಟ್ಲರ್ ಸಿಕ್ಕಿಬಿದ್ದಿರುವನೆಂದು ಹೇಳಲಾಗಿದೆ.

ಮಿತ್ರರು ವ್ರಾಂಡಬೆಗೆ 30 ಮೈಲಿ ಹತ್ತಿರ ಬಂದಿರುವರು.

ಕಟಿನ್ ಅಣೆಕಟ್ಟನ್ನು ಜರ್ಮನರು ಗುಂಡುಮದ್ದಿನಿಂದ ಉಡಾಯಿಸಿದರು.

1942 ರಲ್ಲಿ ಅಮೇರಿಕಾ ಸ್ತ್ರೀಯರು ತುಟಿಯ ಬಣ್ಣ, ಮುಖ ಪೌಡರ್ ಮುಂತಾದ ಖುಷಾಮತ್ತುಗಳಿಗೆ 18000,0000 ರೂ. ವ್ಯಯ ಮಾಡಿರುವರು.

ಇಂಗ್ಲೆಂಡಿನಲ್ಲಿ ಚರ್ಚಿಲ್ಲರು ಒಂದು ಸಿನಿಮಾ ನೋಡುತ್ತಿರುವಾಗ ರೂಸ್ವೆಲ್ಟರು ಮಳೆಯಲ್ಲಿ ಹೋಗುತ್ತಿರುವುದನ್ನು ನೋಡಿ ಅಮೇರಿಕಕ್ಕೆ ಈ ರೀತಿ ತಂತಿ ಕಳುಹಿಸಿದರು:— ನಿಮ್ಮ ಪ್ರೆಸಿಡೆಂಟರನ್ನು ಮಳೆಯಲ್ಲಿ ಓಡಾಡಿಸಬೇಡಿ ನಾನು ಹೀಗೆ ಮಾಡಿದ್ದರೆ ನಿಮ್ಮ ಪ್ರೆಸಿಡೆಂಟರು ನನ್ನನ್ನು ಸುಮ್ಮನೆ ಬಿಡುತ್ತಿದ್ದರೇ ?

ಜರ್ಮನಿಯ ವಿ 3 ಬಾಂಬ್ ಏನಾಯಿತೆಂದು ಅವಕಪಡುತ್ತಿರುವರಷ್ಟೆ. ಈ ವಿ 3 ಬಾಂಬು ಇಷ್ಟರಲ್ಲೇ (?) ಪ್ರಯೋಗಿಸಲಾಗುವುದೆಂದೂ, ಅದು ಬಿದ್ದ ಸ್ಥಳದಲ್ಲಿ ಆಗುವ ಅನಾಹುತವು ಕಣ್ಣಿನಿಂದ ನೋಡಲಾರದಷ್ಟು ಭಯಂಕರವಾಗಿ ಸಿಡಿಯುವುದೆಂದೂ ಲಂಡನ್ನಿನಲ್ಲಿ ಎಲ್ಲರ ಬಾಯಲ್ಲೂ ಇದೇ ಮಾತಾಗಿದೆ!

ಆಲ್ಪ್ಸ್ ಬೆಟ್ಟದ ಕಣಿವೆಯಲ್ಲಿ ನೂರಾರು ಕುರಿಗಳು ಮೇಯುತ್ತಿದ್ದವು. ಅಲ್ಲೇ ಒಂದು ಆಲ್ಸಸ್ ನಾಯಿಯನ್ನು ಕಟ್ಟಿದ್ದರು. ಹಿಟ್ಲರ್ ವಿಮಾನವೊಂದು ಆ ಮಾರ್ಗವಾಗಿ ಹೋಯಿತು. ವಿಮಾನ ಶಬ್ದವನ್ನು ನಾಯಿ ಕೇಳಿ ಬೆದರಿ ಸರಪಣಿ ಕಿತ್ತುಕೊಂಡು ಓಡುತ್ತಾ, ಕುರಿಗಳನ್ನೆಲ್ಲಾ ಅಪಾಯವಿಲ್ಲದ ಸ್ಥಳಕ್ಕೆ ಒಯ್ಯಿತು. ಅಲ್ಲಿ ಹಿಮದಿಂದ ೪ ಕುರಿಗಳು ಸತ್ತವು. 31 ನ್ನು ಕೊಲ್ಲಬೇಕಾಯಿತು. ಈ ನಷ್ಟಕ್ಕಾಗಿ ಕುರಿಯ ಮಾಲೀಕನು ನಾಯಿಯ ಮಾಲೀಕನ ಮೇಲೆ ದಾವಾ ಮಾಡಿದನು. ಅಪರಾಧಿಯು ತನ್ನ ತಪ್ಪೇನೂ ಇಲ್ಲ, ಇದಕ್ಕೆ ಹಿಟ್ಲರೇ ಕಾರಣ ಎಂದನು. ವಿಮಾನ ಬಂದಿದ್ದರಿಂದ ನಾಯಿಯು ಬೆದರಿ ಈ ಕೆಲಸ ಮಾಡಿತು, ಅವನನ್ನು ಎರಡನೇ ಅಪರಾಧಿಯನ್ನಾಗಿ ಸೇರಿಸಬೇಕು ಎಂದು ಕೇಳಿಕೊಂಡನು. ಜಡ್ಜಿಯು ಈ ವಾದ ಕೇಳಿ, ಅಪರಾಧಿಯು ಮೇಲಿನ ನ್ಯಾಯಸ್ಥಾನದಿಂದ ಅನುಕೂಲ ಪಡೆಯಬಹುದೆಂದು ಫಿರ್ಯಾದಿಗೆ ರೂ. 1500 ಪರಿಹಾರ ಕೊಡಿಸಿದನು. ಮುಂದೆ ಯುದ್ಧದಿಂದ ನಷ್ಟವಾದ ದ್ರವ್ಯವನ್ನು ಹಿಟ್ಲರಿಂದ ವಸೂಲ್ಮಾಡುವ ಪಟ್ಟಿಯಲ್ಲಿ ಈ 1500 ರೂ. ಗಳನ್ನೂ ಸೇರಿಸಬೇಕೆಂದು ಸೂಚಿಸಿದನು.

ತ್ಯಾಗರಾಜ ಭಾಗವತರ್ ಮತ್ತು ಎನ್. ಎಸ್. ಕೃಷ್ಣನ್‌ರವರ ಜಾಮೀನ್ ವಜಾ ಆಯಿತು.

ಲಕ್ಷ್ಮೀಕಾಂತಂ ಮೊಖದ್ದಮೆ ಸಂಬಂಧದಲ್ಲಿ ಇವರಿಗೆ ಹಿಂದೆ ಕೊಟ್ಟಿದ್ದ ಜಾಮೀನು ಅರ್ಜಿಯು ವಜಾ ಮಾಡಲ್ಪಟ್ಟಿದೆ. ಭಾಗವತರು ಮ್ಯಾಜಿಸ್ಟ್ರೇಟ್ ಕೋರ್ಟಿಗೆ ತಾವೇ ಶರಣಾಗತರಾದರು. ಕೃಷ್ಣನ್‌ರವರು ದಸ್ತಗಿರಿ ಮಾಡಲ್ಪಟ್ಟರು. 19 ನೇ ತಾರೀಖಿನವರೆಗೆ ರಿಮ್ಯಾಂಡು ಮಾಡಲ್ಪಟ್ಟರು.

○ ○

ಇತ್ತ ಕೇಳಿ !

ಮುಂದೆ ರಷ್ಯಾ ಏಷ್ಯಾ ಮತ್ತು ಯೂರೋಪಿನಲ್ಲಿ ತನ್ನ ಯಜಮಾನ್ಯವನ್ನು ರಷ್ಯನರು ಮಾಡುವರು. ನಾವು ಯುದ್ಧ ಹೂಡಿದ್ದು ಪೋಲೆಂಡಿಗೆ ಸಹಾಯ ಮಾಡಲು. ಅದು ಹೋಗಿ ಹಿಟ್ಲರನ ಹಿಡಿತಕ್ಕಿಂತ ಹೆಚ್ಚಾಗಿಯೇ ರಷ್ಯನ್ನರು ಭೂಮಿಯನ್ನು ಆಕ್ರಮಿಸಿರುವರು. ಯುದ್ಧಾನಂತರ ಬ್ರಿಟನ್ ಸ್ಥಾನ ಎರಡನೇದಕ್ಕೆ ಇಳಿಯುವದು. ಬ್ರಿಟನ್ ಪ್ರಪಂಚಕ್ಕೆ ಮಾದರಿ ತೋರಿಸಬೇಕು. ಬ್ರಿಟನ್ ಶಸ್ತ್ರಾಸ್ತ್ರಗಳನ್ನು ಬಿಸಾಡಬೇಕು. ಹಣವನ್ನು ಸಿವಿಲ್ ಜನರಿಗೆ ಉಪಯೋಗ ಮಾಡಬೇಕು. ಹೀಗೆಂದು ಶ್ರೀಮಂತ ಸರ್ವಾಧಿಕಾರಿ ತತ್ವದ ಅನುಯಾಯಿ ಡ್ಯೂಕ್ ಆಫ್ ಬೆಡ್‌ಫರ್ಡರವರು ಹೇಳಿರುವರು.

○ ○

ಬೆಕ್ಕನ್ನು ತಿನ್ನುತ್ತಿದ್ದಾರೆ

ಪ್ಯಾರಿಸ್ಸಿನವರು ಬೆಕ್ಕನ್ನು ತಿನ್ನುತ್ತಿದ್ದಾರೆ. ಈಗಾಗಲೇ ಅಲ್ಲಿಯ 30 ಸಾವಿರ ಬೆಕ್ಕುಗಳು ಮಾಯವಾಗಿವೆಯಂತೆ. ಒಂದು ಬೆಕ್ಕಿಗೆ 30 ಷಿಲ್ಲಿಂಗು; ಮಾಂಸಕ್ಕೆ 15 ಷಿಲಿಂಗು. ತೊಗಲಿಗೆ 15 ಷಿಲ್ಲಿಂಗು.

ಈ ವಾರ ನಿಮ್ಮ ಗ್ರಹಗತಿಗಳು ಹೇಗಿವೆ ?

(ಓಂ ಜೋತಿಷ್ಕರಿಂದ)

ಮೇಷ

ಪ್ರಯತ್ನಪಟ್ಟು ನಿಗ್ರಹಿಸಲು ಯತ್ನಿಸಿರಿ. ಆಗ ಮುಂದಿನ ಪಲವು ಸುಖಗಮವಾಗುವುದು. ಆರೋಗ್ಯ ಧನಲಾಭ ಇವುಗಳ ವಿಷಯದಲ್ಲಿ ಕೊರತೆ ಇರುವುದಿಲ್ಲ. ಚಿತ್ತಶಾಂತತೆ ಕೆಲಸಕಾರ್ಯಗಳಲ್ಲಿ ಅಭಿವೃದ್ಧಿಯೂ ಇರುತ್ತದೆ.

ವೃಷಭ

ಸಂದೇಹಗಳನ್ನು ದೂರ ಮಾಡಿ ಕೆಲಸಗಳಿಗೆ ಕೈಹಾಕಿ ಸ್ವಲ್ಪಮಟ್ಟಿಗೆ ಧನಲಾಭವಾಗುವ ಸಂಭವವುಂಟು. ಹೆದರಬೇಡಿ,

ಮಿಥುನ

ಮಾನಸ ವ್ಯಾಧಿಗೆ ಅವಕಾಶ ಕೊಡಬೇಡಿ. ಧೈರ್ಯಂ ಸರ್ವತ್ರ ಸಾಧನಂ ಎಂಬ ವಿಚಾರ ಸೂಕ್ತವನ್ನು ನೆನಪಿನಲ್ಲಿಡಿ. ವಿಘ್ನಗಳು ಒಂದೊದಗಿದರೂ ಧೈರ್ಯವನ್ನು ಬಿಡಬೇಡಿ.

ಕರ್ಕಾಟಕ

ಯಾರನ್ನೂ ನಂಬಬೇಡಿ. ಈ ವಾರದಲ್ಲಿ ನಂಬಿಕೆಯನ್ನಿಟ್ಟಲ್ಲಿ ಸರ್ವನಾಶ. ಜಾಗ್ರತೆ, ಮನಸ್ಸನ್ನು ನಿರ್ಮಲವಾಗಿಟ್ಟುಕೊಳ್ಳಿ,

ಸಿಂಹ

ನರೋಗ್ಯ ಧನಲಾಭ ಸಂಭಾವನೆ ಉದ್ಯೋಗ ಲಾಭ ಇವೆಲ್ಲಾ ನಿಮ್ಮವುಗಳಾಗಿರುತ್ತವೆ. ಸಮಾಜ ಸೇವೆಗೆ ಕೈಹಾಕಿದಲ್ಲಿ ಜಯ ಮತ್ತು ಕೀರ್ತಿ.

ಕನ್ಯಾ

ಧನಾಭಾವವಿರದು. ಆರೋಗ್ಯವು ಸಮಾಧಾಗಿರುತ್ತದೆ. ಆದರೆ ಯಾವ ಚಿಂತೆಯನ್ನೂ ಮನಸ್ಸಿಗೆ ತಂದುಕೊಳ್ಳಬೇಡಿ. ನಿಶ್ಚಿಂತೆಯಿಂದಿರಿ, ದುರ್ಜನರ ಸಹವಾಸವನ್ನು ಮಾಡಬೇಡಿ,

ತುಲಾ

ನಿಮಗೆ ದೈವಚಿಂತನೆಯ ಅವಶ್ಯಕತೆ ಇದೆ. ಆದರ ವಿನಃ ಸುಖ ಸಿಗಲಾರದು, ಕಾಮಾದಿ ಅರಿಷಡ್ವರ್ಗದಿಂದ ದೂರಾಗಿ.

ವೃಶ್ಚಿಕ

ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು. ವ್ಯಾಪಾರಾದಿಗಳಲ್ಲಿ ಸುಖವು ಲಭಿಸುವುದು. ಸಮಾಜ ಸೇವೆಯ ಪುಣ್ಯವು ಪ್ರಾಪ್ತಿಯಾಗುವುದು. ಧರ್ಮಕಾರ್ಯಗಳಲ್ಲಿ ಪ್ರವೃತ್ತರಾಗುವಿರಿ.

ವಿವಿಧ ವಿಷಯ

ಬ್ರಿಟನಿನ ಅತ್ಯಂತ ದೊಡ್ಡದಾದ ನೌಕಾ ವಿಮಾನ ನಿಲ್ದಾಣವು ಈಗ ಶಾಂತಿ ಸಾಗರದಲ್ಲಿ ಕೆಲಸ ಮಾಡುತ್ತಿದೆ. ಇದರ ತೂಕ 30 ಸಾವಿರ ಟನ್. ಅದರಲ್ಲಿ ಕೆಲಸ ಮಾಡುವವರ ಸಂಖ್ಯೆ 2000 ಕ್ಕೆ ಮೀರಿದೆ.

◦ ◦

ಲಕ್ನೋದಲ್ಲಿ ಮುಸ್ಲಿಮರ ಸುನ್ನಿ ಸಿಯಾ ಪಂಗಡಗಳಿಗೆ ಜಗಳವಾಗಿ ಕಲ್ಲು ಹೆಂಟೆಗಳನ್ನು ಒಬ್ಬರಿಗೊಬ್ಬರು ಧಾರಾಳವಾಗಿ ಎಸೆದಾಡಿದರು. ಪಾಕಿಸ್ಥಾನ್ ಜಿನ್ನರು ಇತ್ತ ಗಮನಿಸುವರೇ?

◦ ◦

ಕಾಂಗ್ರೆಸ್ ಬಾವಟವು ದೆಹಲಿಯ ನ್ಯಾಯಸ್ಥಾನದ ಧೂಳು ಹೊಡೆಯಲು ಉಪಯೋಗಿಸುತ್ತಿರುವರಂತೆ.

◦ ◦

ಕಲ್ಕತ್ತಾದಲ್ಲಿ ಸಿಡುಬಿನ ಉಪದ್ರವವನ್ನು ಶಮನ ಮಾಡಲು 5 ಲಕ್ಷ ಜನರಿಗೆ ದೇವಿಹಾಕಿದಮೇಲೆ ಉಪಯೋಗಿಸಿದ ಹಾಲು ಒಳ್ಳೇದಲ್ಲವೆಂದು ತಿಳಿದುಬಂದಿತು. ಮತ್ತೆ ಅವರಿಗೆ ದೇವಿ ಹಾಕಲಾಗುತ್ತೆ.

ಧನು

ನಿಮ್ಮನ್ನು ಯಾರೂ ಏನೂ ಮಾಡಲಾರರು. ನಿಮಗೆ ದೈವಾನುಗ್ರಹವಿದೆ. ಸ್ವಲ್ಪ ಧನಾಭಾವವಾಗುವ ಸೂಚನೆ ಇದೆ. ಧೈರ್ಯದಿಂದ ವರ್ತಿಸಿರಿ.

ಮಕರ

ಉತ್ಪತ್ತಿ ಕಡಮೆ, ಖರ್ಚು ಹೆಚ್ಚಾಗುವುದು. ಕೆಲಸ ಕಾರ್ಯಗಳಲ್ಲಿ ವಿಘ್ನಗಳು ಪ್ರಾಪ್ತವಾಗಬಹುದು. ಪ್ರಾಪ್ತವಾಗಬಹುದು. ಆದರೆ ಸ್ನೇಹಿತರ ಸಹಾಯ ಒದಗುವುದು.

ಕುಂಭ

ಜಾಗ್ರತೆ, ಎಲ್ಲರನ್ನೂ ಒಳ್ಳೆಯವರೆಂದು ಭಾವಿಸದೆ ಯಾರನ್ನು ಎಷ್ಟು ದೂರದಲ್ಲಿಟ್ಟರಬೇಕೋ ಅಷ್ಟು ದೂರದಲ್ಲಿಟ್ಟಿರಿ. ಖರ್ಚು ಹೆಚ್ಚು. ದಾನಧರ್ಮಯೋಗವುಂಟು.

ಮೀನ

ನಿಮ್ಮ ಕೈ ಮೇಲಾಗಿರುತ್ತದೆ. ಸಂತೋಷ ಪ್ರಾಪ್ತಿಯಾಗುತ್ತದೆ. ಧನಲಾಭವುಂಟು. ಯಶಸ್ಸೂ ಸಂಪದವೂ ಹೆಚ್ಚುವುದು. ಧರ್ಮಕಾರ್ಯ ನಿರತರಾಗುವಿರಿ. ಸಂತೋಷದಿಂದ ಕೂಡಿರುವಿರಿ.

ನಿಖಿಲ ಕರ್ನಾಟಕ ಆಯುರ್ವೇದ ಮಂಡಲಿ, ಮೈಸೂರು

ಅಖಿಲ ಭಾರತ ಆಯುರ್ವೇದ ಮಹಾಸಮ್ಮೇಳನವು ಈ ವರ್ಷ ನಮ್ಮ ಕರ್ನಾಟಕ ಪ್ರಾಂತ್ಯದಲ್ಲಿ ನಡೆಯುವುದಿದೆ. ಅಖಂಡ ಭಾರತದಿಂದ ಮಹಾವಿದ್ವಸ್ಮಣಿಗಳೆಲ್ಲಾ ಬಂದು ಸೇರಿ ನಡೆಯಲಿರುವ ಈ ಮಹಾ ಸಭೆಯನ್ನು ಯಶಸ್ವಿಯಾಗಿ ನೆರವೇರಿಸುವ ಭಾರವು ಕನ್ನಡ ಬಂಧುಗಳಿಗೆ ಸೇರಿರುತ್ತದೆ. ಧನಜನ ಸಹಾಯವು ಕರ್ನಾಟಕ ಬಂಧುಗಳಾದ ಸಾರ್ವಜನಿಕರಿಂದ ಸಿಗುವುದಾದರೂ ಆಯುರ್ವೇದ ಶಾಸ್ತ್ರ ದೃಷ್ಟಿಯಿಂದ ಮತ್ತು ಪ್ರಚಾರ ದೃಷ್ಟಿಯಿಂದ ನಮ್ಮ ಪ್ರಾಂತ್ಯದಲ್ಲಿ ನಡೆಯುವ ಮಹಾಸಭೆಗೆ ಹೆಚ್ಚು ಪ್ರಾಶಸ್ತ್ಯವನ್ನು ತರುವ ಜವಾಬ್ದಾರಿಯು ಕರ್ನಾಟಕದ ವೈದ್ಯ ಬಂಧುಗಳಿಗೆ ಸೇರುತ್ತದೆ. ಕರ್ನಾಟಕವು ಭರತಖಂಡದ ಯಾವ ಪ್ರಾಂತ್ಯಕ್ಕಿಂತಲೂ ಹಿಂದುಳಿದಿಲ್ಲವೆಂದು ರುಜುಪಡಿಸಿ ಇತರ ಪ್ರಾಂತ್ಯಗಳಿಗಿಂತಲೂ ಕರ್ನಾಟಕವು ಆಯುರ್ವೇದ ವಿಷಯದಲ್ಲಿ ಮುರಿದುಪರಿದು ಹಿರಿದಾದುದೆಂಬ ವಿಷಯವನ್ನು ಸರ್ವರಿಗೂ ತೋರಿಸಿ ಕರ್ನಾಟಕದ ಕೀರ್ತಿಯನ್ನು ಬೆಳಗಿಸುವುದು ನಮ್ಮ ಕರ್ತವ್ಯವಾಗಿದೆ. ಆದುದರಿಂದ ಆಯುರ್ವೇದ ವಿಷಯದಲ್ಲಿ ಕರ್ನಾಟಕ ವೈಶಿಷ್ಟ್ಯವನ್ನು ಜನತೆಗೆ ತೋರಿಸುವ ಸಲುವಾಗಿ ನಾವು ಹಲವು ವಿಧಾನಗಳನ್ನು ಕೈಗೊಳ್ಳಬೇಕಾಗಿದೆ. ಅವುಗಳ ಪೈಕಿ ಒಂದಾಗಿ ' ಕರ್ನಾಟಕ ಆಯುರ್ವೇದ ಕೈಪಿಡಿ ' (Karnatic Ayurvedic Guide) ಪ್ರಕಟಿಸಬೇಕಾಗಿ ಯೋಚಿಸಿರುತ್ತದೆ. ಸದರಿ ಪುಸ್ತಕದಲ್ಲಿ ಕರ್ನಾಟಕದೊಳಗಿರುವ ಎಲ್ಲಾ ವೈದ್ಯರು, ಆಯುರ್ವೇದ ಪಾಠಶಾಲೆಗಳು, ವೈದ್ಯಶಾಲೆಗಳು, ಗ್ರಂಥಕಾರರು, ಪತ್ರಿಕಾಕರ್ತರು, ಇತ್ಯಾದಿ ಎಲ್ಲವನ್ನೂ ವಿವರಿಸಲಾಗುವುದು. ಈ ವಿಷಯದಲ್ಲಿ ಪ್ರತಿಯೊಬ್ಬ ವೈದ್ಯರೂ ತಮ್ಮ ಹೆಸರು ವಿಳಾಸಗಳನ್ನು ಮತ್ತು ಪಾಠಶಾಲೆ, ಔಷಧಶಾಲೆ, ಕಾರಖಾನೆ, ರಚಿತಗ್ರಂಥ, ಪತ್ರಿಕೆಗಳ ವಿವರಗಳನ್ನು ನಮಗೆ ತಿಳಿಸಿ ಸಹಕರಿಸಬೇಕಾಗಿ ವಿನಂತಿ.

ಈ ಸಂಬಂಧವಾಗಿ ಹೆಚ್ಚಿಗೆ ವಿಚಾರ ತಿಳಿದುಕೊಳ್ಳಲಪೇಕ್ಷಿಸುವವರು ಒಂದೂವರೆ ಆಣೆ ಚೀಟಿ ಸಮೇತ ನಮಗೆ ಬರೆಯುವುದು.

ಕಾರ್ಯದರ್ಶಿ, ನಿಖಿಲ ಕರ್ನಾಟಕ ಆಯುರ್ವೇದ ಮಂಡಲಿ
ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

" ಲಿಗ್‌ನಿನ್ " ಕಾಗದ ತಯಾರಿಯಲ್ಲಿ ಸಿಗುವ ಉಪ ಪದಾರ್ಥ. ಇದನ್ನು ಯಾರೂ ಉಪಯೋಗಿಸುತ್ತಿರಲಿಲ್ಲ. ಇದನ್ನು ಈಗ ಕೆನಡಾದಲ್ಲಿ ರಸ್ತೆಗಳಿಗೆ ಉಪಯೋಗಿಸುತ್ತಿರುವರು. ಇದನ್ನು ಜಲ್ಲಿಯಲ್ಲಿ ಸೇರಿಸಿದರೆ ನೆಲವು ಗಟ್ಟಿಯಾಗುವುದು.

ಇಟಲಿಯಲ್ಲಿ 5 ಮಂದಿಯಲ್ಲಿ 4 ಮಂದಿಯು ಇಟಲಿಯಲ್ಲಿ ರಿಪಬ್ಲಿಕ್ ಸರಕಾರವಾಗಬೇಕೆಂದು ಅಪೇಕ್ಷಿಸುವರೆಂದು ರೋಂ ಪತ್ರಿಕೆಯೊಂದು ಬರೆದಿದೆ.

ಅಮೇರಿಕ ಸರಕಾರವು 1945 ರಲ್ಲಿ ನೌಕೆ ಮತ್ತು ವಿಮಾನ ತಯಾರಿಕೆಗಾಗಿ 8000 ಮಿಲಿಯ ಡಾಲರ್ ವ್ಯಯಮಾಡಲು ಅಂದಾಜಾಗಿದೆ.

ಸತ್ಯಪ್ರಕಾಶದಲ್ಲಿ ಮುಸ್ಲಿಮರಿಗೆ ಆಕ್ಷೇಪಕರವಾದ ಭಾಗವನ್ನು ತೆಗೆದು ತಿದ್ದುಪಡಿಸುವುದು ಸೂಕ್ತವೆಂದು ಗಾಂಧೀಜಿ ಅಭಿಪ್ರಾಯ ಪಟ್ಟಿರುವರು.

ರಾಜರಿಗೂ ಮುಸ್ಲಿಂ ಲೀಗಿಗೂ ಒಪ್ಪಂದ ತಪ್ಪು, ಪಾಕಿಸ್ಥಾನ್ ಒಪ್ಪಿ ವೈಸರಾಯ್ ಮತ್ತು ಆಲಿಸಂ ವಿರುದ್ಧ ಹೋರಾಡಲು ಭೂಪಾಲ್ ನವಾಬರು ಯತ್ನಿಸುತ್ತಿರುವರೆಂದು ತಿಳಿಯಬಂದಿದೆ.

ತ್ರಿಮೂರ್ತಿಗಳ ಸಮ್ಮೇಳನದಲ್ಲಿ ಫ್ರಾನ್ಸು ಭಾಗವಹಿಸಿಲ್ಲವಾಗಿ ಈ ಸಮ್ಮೇಳನದ ತೀರ್ಮಾನಕ್ಕೆ ಫ್ರಾನ್ಸು ಬದ್ಧವಾಗಿಲ್ಲವೆಂದು ಡಿಗಾಲರು ಮಿತ್ರರಿಗೆ ನೋಟೀಸು ಕೊಟ್ಟಿರುವರೆಂದು ಹೇಳಲಾಗಿದೆ.

ಮದರಾಸಿನಲ್ಲಿ ಸಂಬಳ ಕಮಿಟಿಯು ಗುಮಾಸ್ತರ ಸಂಬಳ ಕಡೆಪಕ್ಷ ರೂ. 40 ಇರಬೇಕೆಂದು ಸಿಫಾರಸ್ ಮಾಡಿದೆ.